**2 ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ**
**ಮಾಗಡಿ**
**ಕ್ರಿಮಿನಲ್ ಪ್ರಕರಣ ಸಂಖ್ಯೆ :352/2019**
**ಚಾಸಾ :- 03 / ಪ್ರಾಸಾ :- 02**

| | |
|---|---|
| ಹೆಸರು | **ಮುನಿಬಾಯಿ** |
| ಗಂಡನ ಹೆಸರು | **ಗಂಗಾನಾಯಕ** |
| ವಯಸ್ಸು | **70** |
| ಉದ್ಯೋಗ | **ಕೂಲಿ ಕೆಲಸ** |
| ವಿಳಾಸ | **ಗೊಲ್ಲರಪಾಳ್ಯ** |

**ದಿನಾಂಕ: 23-03-2023** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ :- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ :-**

ಪ್ರಾಸಾ-1 ಮತ್ತು ಚಾಸಾ-2 ರವರು ನನಗೆ ಗೊತ್ತು, ಅವರು ನಮ್ಮ ಗ್ರಾಮದವರು. ಸುಮಾರು 6 ವರ್ಷದ ಹಿಂದೆ ಸಂಜೆ 5 ಗಂಟೆಯ ಸಮಯದಲ್ಲಿ ಪ್ರಾಸಾ-1 ರವರು ದನವನ್ನು ಹೊಡೆದುಕೊಂಡು ಹೋಗುವಾಗ, 1 ನೇ ಆರೋಪಿಯು ಅಲ್ಲಿಗೆ ಬಂದು ಪ್ರಾಸಾ 1 ರವರಿಗೆ ಕೈಗಳಿಂದ ಹೊಡೆದರು. 2 ನೇ ಆರೋಪಿಯು ಪ್ರಾಸಾ-1 ರವರಿಗೆ ಕೈಯಿಂದ ಬೆನ್ನು ಮತ್ತು ಕೈಗಳಿಗೆ ಹೊಡೆದರು. ಅದನ್ನು ಹೊರತುಪಡಿಸಿ 2 ನೇ ಆರೋಪಿಯು ಪ್ರಾಸಾ-1 ರವರಿಗೆ ಏನನ್ನೂ ಹೇಳಲಿಲ್ಲ. 3 ನೇ ಆರೋಪಿಯು ಪ್ರಾಸಾ-1 ರವರಿಗೆ ಕೊಲೆ ಬೆದರಿಕೆಯನ್ನು ಹಾಕಿದರು.

ನಾನು ಮತ್ತು ಚಾಸ-2 ರವರು ಹೋಗಿ ಜಗಳವನ್ನು ಬಿಡಿಸಿದೆವು. ಈ ವಿಚಾರಕ್ಕೆ ಸಂಬಂಧಿಸಿದಂತೆ ನಾನು ಪೋಲಿಸರಿಗೆ ಹೇಳಿಕೆಯನ್ನು ನೀಡಿದ್ದೇನೆ. ನಾನು ನ್ಯಾಯಾಲಯದ ಮುಂದೆ ಇರುವ ಆರೋಪಿಗಳನ್ನು ಗುರುತಿಸುತ್ತೇನೆ.

**ಪಾಟೀ ಸವಾಲು :- ಆರೋಪಿಗಳ ಪರ ಶ್ರೀ. ಎಂ ಎನ್ ,** ವಕೀಲರಿಂದ :-

ನನಗೆ ಯಾವ ದಿನ, ತಿಂಗಳು ಮತ್ತು ವರ್ಷದಲ್ಲಿ ಜಗಳವಾಯಿತು

ಎಂದು ಹೇಳುವ ಎಂದರೆ ಸುಮಾರು 6 ವರ್ಷಗಳ ಹಿಂದೆ ಜಗಳವಾಯಿತು, ಸಾಕ್ಷಿ ಮುಂದುವರೆದು ನನಗೆ ಓದಲು ಬರೆಯಲು ಬರುವುದಿಲ್ಲ ಎಂದು ನುಡಿಯುತ್ತಾರೆ. ಗೊಲ್ಲರಪಾಳ್ಯದಲ್ಲಿ ಸುಮಾರು 150 ಮನೆಗಳಿವೆ. ಜಗಳ ನಡೆಯಿತು ಎಂದು ಹೇಳುವ ಸಮಯದಲ್ಲಿ ಸುಮಾರು 4 ಜನ ಇದ್ದರು ಸಾಕ್ಷಿ ಮುಂದುವರೆದು ನರಸಿಂಹಯ್ಯನವರು ಇದ್ದರು ಎಂದು ನುಡಿಯುತ್ತಾರೆ. ನನಗೆ 4 ಜನರ ಹೆಸರು ತಿಳಿದಿಲ್ಲ , ಚಾಸಾ-5 ಮತ್ತು ನಾನು ಅಲ್ಲಿ ಇದ್ದೆವು ಇನ್ನಿಬ್ಬರ ಹೆಸರು ನನಗೆ ತಿಳಿದಿಲ್ಲ.

1 ನೇ ಆರೋಪಿಯು ಪ್ರಾಸಾ-1 ರವರಿಗೆ ಎಲ್ಲೆಲ್ಲಿ ಹೊಡೆದರು ಎಂದು ಹೇಳಲು ನನಗೆ ಆಗುವುದಿಲ್ಲ, ಸಾಕ್ಷಿ ಮುಂದುವರೆದು ಕೈಯಿಂದ ಹೊಡೆದಿರುತ್ತಾರೆ ಎಂದು ನುಡಿಯುತ್ತಾರೆ. 2 ನೇ ಆರೋಪಿಯು ಪ್ರಾಸಾ-1 ರವರಿಗೆ ಹೊಡೆದರು ಎಂದು ಹೇಳಲು ನನಗೆ ಆಗುವುದಿಲ್ಲ. ಪ್ರಾಸಾ-1 ರವರು ನನ್ನ ಸಂಬಂಧಿಕರು. ಪ್ರಾಸಾ-1 ರವರು ನನ್ನ ಓರಗಿತ್ತಿ.

ನಾನು ಗಲಾಟೆ ನಡೆಯಿತು ಎಂದು ಹೇಳುವ ಬಳಿಕ ನಾನು ಪೋಲಿಸ್ ಠಾಣೆಗೆ ಹೋಗಿಲ್ಲ. ನನಗೂ ಮತ್ತು ಪ್ರಾಸಾ-1 ರವರಿಗೂ ಹಾಗೂ ಆರೋಪಿಗಳಿಗೂ ಸುಮಾರು 20 ವರ್ಷಗಳಿಂದ ದಾರಿ ವಿಷಯಕ್ಕೆ ಮಾತುಕತೆ ಇಲ್ಲ. ನನಗೂ ಮತ್ತು ಪ್ರಾಸಾ-1 ರವರಿಗೂ ಮತ್ತು ಆರೋಪಿಗಳಿಗೂ ಮಾತುಕತೆ ಇಲ್ಲದ ಕಾರಣ ಆರೋಪಿತರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಲ್ಲಿ ಗಲಾಟೆ ನಡೆಯದಿದ್ದರೂ ಸಹ ಆರೋಪಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ- ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**2 ನೇ ಅ. ನ್ಯಾ. ದಂ. ಮತ್ತು ಜೆಎಂಎಫ್‌ಸಿ, ಮಾಗಡಿ.**

**2 ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ**
**ಮಾಗಡಿ**
**ಕ್ರಿಮಿನಲ್ ಪ್ರಕರಣ ಸಂಖ್ಯೆ ::352/2019**
**ಚಾಸಾ :- 01 / ಪ್ರಾಸಾ :- 01**

| | |
|---|---|
| ಹೆಸರು | **ಗೌರಿಬಾಯಿ** |
| ಗಂಡನ ಹೆಸರು | **ಮುನಿಸ್ವಾಮಿನಾಯಕ** |
| ವಯಸ್ಸು | **56** |
| ಉದ್ಯೋಗ | **ಕೂಲಿ ಕೆಲಸ** |
| ವಿಳಾಸ | **ಗೊಲ್ಲರಪಾಳ್ಯ** |

**ದಿನಾಂಕಃ 23-03-2023** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ :- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ :-**

ಚಾಸಾ-2 ಮತ್ತು 3 ರವರು ನನಗೆ ಗೊತ್ತು , ಅವರು ನಮ್ಮ ಗ್ರಾಮದವರು. ಸುಮಾರು 6 ವರ್ಷದ ಹಿಂದೇ ನಾನು ದನವನ್ನು ಮೇಯಿಸಿಕೊಂಡು ಸಂಜೆ 5 ಗಂಟೆಯ ಸಮಯದಲ್ಲಿ ವಾಪಸ್ಸು ಮನೆಗೆ ಬರುತ್ತಿದ್ದೆನು. ಆ ಸಮಯಕ್ಕೆ 1 ರಿಂದ 3 ನೇ ಆರೋಪಿಗಳು ನನ್ನ ಬಳಿ ಬಂದು ನಮ್ಮ ಜಮೀನಿನ ಬಳಿ ಏಕೆ ಬರುತ್ತೀಯ ನಿನಗೆ ಓಡಾಡಲು ಇಲ್ಲಿ ಜಾಗ ಇಲ್ಲ ಎಂದು ಹೇಳಿದರು.

2 ನೇ ಆರೋಪಿಯು ನನ್ನ ಜುಟ್ಟನ್ನು ಹಿಡಿದುಕೊಂಡು ಬಲವಾಗಿ ಹೊಡೆದರು. 1 ನೇ ಆರೋಪಿಯು ನೀನು ಏಕೆ ಬರುತ್ತೀಯ ಅಂತ ಹೇಳಿ ಕೆಟ್ಟದಾಗಿ ಬೈದರು ಮತ್ತು ಕೈಯಿಂದ ಹೊಡೆದರು. ಆಗ 3 ನೇ ಆರೋಪಿಯು ಬಂದು ನಮ್ಮ ಜಮೀನಿಗೆ ಏಕೆ ಬರುತ್ತೀಯ ಮತ್ತು ಇನ್ನು ಮುಂದೆ ಬಂದರೆ ನನ್ನನ್ನು ಕೊಲೆ ಮಾಡುತ್ತೇವೆ ಎಂದು ಬೆದರಿಕೆ ಹಾಕಿದರು.

ಆ ಸಮಯಕ್ಕೆ ಚಾಸಾ-2 ಮತ್ತು 3 ರವರು ಬಂದು ಗಲಾಟೆಯನ್ನು ಬಿಡಿಸಿದರು. ನಂತರ ಈ ವಿಷಯವನ್ನು ನಮ್ಮ ಊರಿನ ಗ್ರಾಮಸ್ಥರಿಗೆ ತಿಳಿಸಿದೆವು. ಗ್ರಾಮಸ್ಥರು ಕರೆದಾಗ ಆರೋಪಿಗಳು ನ್ಯಾಯ ಪಂಚಾಯಿತಿಗೆ ಬರಲಿಲ್ಲ. ಆಗ ನಾನು ಪೋಲೀಸ್ ಠಾಣೆಯಲ್ಲಿ ದೂರನ್ನು ನೀಡಿದೆನು. ಈಗ ನನಗೆ ಒಂದು

ದಾಖಲೆಯನ್ನು ತೋರಿಸಿದ್ದು, ಅದು ನಾನು ನೀಡಿದ ದೂರಾಗಿದೆ ಮತ್ತು ಅದರಲ್ಲಿ ನನ್ನ ಎಡಗೈ ಹೆಬ್ಬಟ್ಟಿನ ಗುರುತಿದೆ. ದೂರನ್ನು ನಿಪಿ-1 ಎಂದು ಗುರುತಿಸಲಾಯಿತು.

ಈಗ ನನಗೆ ಒಂದು ದಾಖಲೆಯನ್ನು ತೋರಿಸಿದ್ದು, ಅದು ಪಂಚನಾಮೆಯಾಗಿದೆ ಮತ್ತು ಅದರಲ್ಲಿ ನನ್ನ ಎಡಗೈ ಹೆಬ್ಬಟ್ಟಿನ ಗುರುತಿದೆ. ಪಂಚನಾಮೆಯನ್ನು ನಿಪಿ-2 ಎಂದು ಗುರುತಿಸಲಾಯಿತು. ನಿಪಿ-2 ನ್ನು ಮದ್ಯಾಹ್ನ 12.30 ರಿಂದ 1.15 ಸಮಯದವರೆಗೆ ಮಾಡಲಾಯಿತು. ನಿಪಿ-2 ಕ್ಕೆ ನಾನು ಸಹಿ ಮಾಡುವಾಗ ನರಸಿಂಹಯ್ಯ ಮತ್ತು ಮಂಜುನಾಥರವರು ಇದ್ದರು.

ನಂತರ ನಾನು ಪೊಲೀಸ್ ಠಾಣೆಗೆ ಹೋಗಿ ಆರೋಪಿಗಳು ನನಗೆ ಕೊಲೆ ಬದರಿಕೆ ಹಾಕಿ ನನಗೆ ಹೊಡಾಡಲು ಜಮೀನಿನಲ್ಲಿ ಜಾಗವನ್ನು ಬಿಡುವುದಿಲ್ಲ ಎಂದು ಹೇಳಿದೆ. ನಾನು ನನ್ನ ಮರುಹೇಳಿಕೆಯನ್ನು ಪೋಲೀಸ್ ಠಾಣೆಯಲ್ಲಿ ಹೇಳಿದೆನು. ಅದರಲ್ಲಿ ಚಾಸಾ-2 ಮತ್ತು 3 ರವರು ಬಂದು ಬಿಡಿಸಿದರು ಎಂದು ಹೇಳಿದೆನು. ನಾನು ನ್ಯಾಯಾಲಯದ ಮುಂದಿರುವ ಆರೋಪಿಗಳನ್ನು ಗುರುತಿಸಿರುತ್ತೇನೆ.

**ಪಾಟೀ ಸವಾಲು ಃ- ಆರೋಪಿಗಳ ಪರ ಶ್ರೀ. ಎಂ ಎನ್ ,** ವಕೀಲರಿಂದ ಃ-

ನಿಪಿ-1 ನ್ನು ಮಂಜುನಾಥ ಎಂಬುವವರು ಬರೆದಿದ್ದಾರೆ. ಮಂಜುನಾಥ ಎಂಬುವರು ನಮ್ಮ ಗ್ರಾಮಸ್ಥರು. ಅವರು ನಿಪಿ-2 ಕ್ಕೆ ಸಾಕ್ಷಿಯಾಗಿ ಸಹಿ ಮಾಡಿದ್ದಾರೆ. ನಿಪಿ-1 ರಲ್ಲಿ ಚಾಸಾ-2 ಮತ್ತು 3 ರವರ ಹೆಸರನ್ನು ಬರೆಸಲು ತೊಂದರೆ ಇದೆಯ ಎಂದರೆ ಅದಕ್ಕೆ ತಾನೇ ಅವರ ಹೆಸರನ್ನು ಬರೆಸಿದ್ದೇನೆ. 3 ನೇ ಆರೋಪಿಗೂ ಮತ್ತು ಚಾಸಾ-4 ರವರಿಗೆ ಮಾತುಕತೆ ಇಲ್ಲ ಎಂದರೆ ಸರಿಯಲ್ಲ.

ನನಗೂ ಮತ್ತು ಆರೋಪಿಗಳಿಗೂ ಸುಮಾರು 10 ವರ್ಷಗಳಿಂದ ಮಾತುಕತೆ ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ಆಗಾಗ ಜಮೀನಿನ ವಿಷಯಕ್ಕೆ ಜಗಳವಾದಾಗ ಮಾತನಾಡುತ್ತಿದೇವು ಎಂದು ನುಡಿದಿರುತ್ತಾರೆ. ಸುಮಾರು 20 ವರ್ಷಗಳಿಂದ ನನಗೂ ಮತ್ತು

ಆರೋಪಿಗಳಿಗೂ ಜಮೀನಿನ ವಿಷಯಕ್ಕೆ ಮಾತುಕತೆ ನಡೆಯುತಿತ್ತು. ಆರೋಪಿಗಳು ಅವರ ಜಮೀನಿಗೆ ಬೇಲಿ ಹಾಕಿಕೊಂಡಿದ್ದರು ಎಂದರೆ ಸರಿಯಲ್ಲ ಸಾಕ್ಷಿಯು ಮುಂದುವರಿದು ದಾರಿಗೆ ಬೇಲಿಯನ್ನು ಹಾಕಿಕೊಂಡಿದ್ದರು ಎಂದು ನುಡಿದಿರುತ್ತಾರೆ.

ಆರೋಪಿಗಳ ಜಮೀನಿಗೆ  ತಂಟೆ ಮಾಡಿದಕ್ಕೆ ಸಂಬಂಧಿಸಿದಂತೆ ಆರೋಪಿಗಳು ಓ ಎಸ್ ನಂ. 57/2021 ನ್ನು ನನ್ನ ಮತ್ತು ನನ್ನ ಯಜಮಾನರ ವಿರುದ್ದ ಹಾಕಿದ್ದಾರೆ ಎಂದರೆ ಸರಿ. ಸಾಕ್ಷಿಯು ಮುಂದುವರಿದು ಈಗ ನನ್ನ ಯಜಮಾನರು ಮೃತಪಟ್ಟಿರುತ್ತಾರೆ  ಎಂದು ನುಡಿದಿರುತ್ತಾರೆ.

ನಾನು ಸದರಿ ವಿಷಯಕ್ಕೆ ಸಂಬಂಧಿಸಿದಂತೆ ನಮ್ಮ ಗ್ರಾಮಸ್ಥರಾದ ಮಂಜುನಾಥ, ನರಸಿಂಹಯ್ಯ ಮತ್ತು ಬಲರಾಮಯ್ಯನವರಿಗೆ ದೂರನ್ನು ನೀಡಿದ್ದೇನು. ನಾನು ಜಗಳ ನಡೆಯಿತು ಎಂದು ಹೇಳುವ ದಿನದಂದು ಸಾಯಂಕಾಲ ಗ್ರಾಮಸ್ಥರಗೆ ದೂರನ್ನು ನೀಡಿದ್ದೆನು ಮತ್ತು ಅದು ನನಗೆ ಯಾವ ದಿನಾಂಕ, ತಿಂಗಳು ಮತ್ತು ವರ್ಷ  ಎಂದು ನೆನಪಿಲ್ಲ.  ಸಾಕ್ಷಿಯು ಮುಂದುವರಿದು ನನಗೆ ಓದಲು ಮತ್ತು ಬರೆಯಲು ಬರುವುದಿಲ್ಲ ಎಂದು ನುಡಿದಿರುತ್ತಾರೆ. ಗ್ರಾಮಸ್ಥರು ನಮ್ಮನ್ನು ಮರುದಿನ ಬೆಳಗ್ಗೆ ನಮ್ಮನ್ನು ಕರೆಸಿದ್ದರು ಮತ್ತು ಆರೋಪಿಗಳು ಅಲ್ಲಿಗೆ ಬರಲಿಲ್ಲ ಆದ ಕಾರಣ ನಿಮ್ಮ ದಾರಿಯನ್ನು ನೀವೇ ನೋಡಿಕೊಳ್ಳಿ ಎಂದು ಹೇಳಿದರು.

ಗ್ರಾಮಸ್ಥರು ಹೇಳಿದ ಬಳಿಕ ನಾನು ದೂರನ್ನು ನೀಡಿಲಿಲ್ಲ ಮತ್ತು ನಾನು ಆಸ್ಪತ್ರೆಯಲ್ಲಿ ದಾಖಲಾಗಿದ್ದೆನು. ಆದ ಕಾರಣ 15 ದಿನಗಳ ನಂತರ ನಾನು ಪೋಲೀಸ್ ಠಾಣೆಯನ್ನು ನಿಪಿ-1 ನ್ನು ನೀಡಿದ್ದೇನೆ. ನಾನು ಆಸ್ಪತ್ರೆಯಲ್ಲಿ 2-3 ದಿನಗಳ ಕಾಲ ದಾಖಲಾಗಿದ್ದೆನು. ನಾನು ಮಾಗಡಿಯ ಆಸ್ಪತ್ರೆಯಲ್ಲಿ ದಾಖಲಾಗಿದ್ದೆನು. ಆರೋಪಿಗಳು ನನಗೆ ಹೊಡೆದಿದ್ದ ಕಾರಣದಿಂದ ನಾನು ಆಸ್ಪತ್ರೆಗೆ ದಾಖಲಾಗಿದ್ದೆನು. ನಾನು ಆಸ್ಪತ್ರೆಯಿಂದ ವಿಮುಕ್ತಿಗೊಂಡ ನಂತರ ನಾನು ನನ್ನ ಮನೆಗೆ ಹೋದೆನು.

ಆದಾದ ನಂತರ ನಾನು 15 ದಿನಗಳ ಬಳಿಕ ಪೋಲೀಸ್ ಠಾಣೆಗೆ ದೂರನ್ನು ನೀಡಿದೆನು. ಗೊಲ್ಲರಪಾಳ್ಯದಿಂದ ಮೋಟಗೊಂಡನಹಳ್ಳಿಗೆ 3 ಕಿ.ಮೀ. ಅಂತರ ಇದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 5 ಕಿ.ಮೀ.ಅಷ್ಟು ಅಂತರ ಇದೆ ಎಂದು ನುಡಿಯುತ್ತಾರೆ. ಗೊಲ್ಲರಪಾಳ್ಯದಿಂದ ಮಾಗಡಿಗೆ 10 ಕಿ. ಮೀ,ಅಷ್ಟು ಅಂತರ ಇದೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು 8 ಕಿ.ಮೀ.ಅಷ್ಟು ಅಂತರ ಇದೆ ಎಂದು ನುಡಿಯುತ್ತಾರೆ. ಮೊಟಗೊಂಡನಹಳ್ಳಿಯಲ್ಲಿ ಸರ್ಕಾರಿ ಆಸ್ಪತ್ರೆ ಇದೆಯಾ ಎಂದರೆ ಇರಬಹುದು. ಸಾಕ್ಷಿ ಮುಂದುವರೆದು ನಾನು ಚಿಕಿತ್ಸೆಯನ್ನು ಮಾಗಡಿಯಲ್ಲಿ ಪಡೆದುಕೊಂಡೆನು ಎಂದು ನುಡಿಯುತ್ತಾರೆ.

ಚಾಸಾ-04 ರವರು ನಿಪಿ-1 ಅನ್ನು ನಮ್ಮ ಊರಿನಲ್ಲಿ ಬರೆದುಕೊಂಡು ಪೋಲಿಸ್ ಠಾಣೆಗೆ ಹೋಗಿ ನೀಡಿರುತ್ತಾರೆ. ಆಗ ಅವರ ಜೊತೆ ಚಾಸಾ-2 ಮತ್ತು 5 ರವರೂ ಸಹ ಬಂದಿದ್ದರು. ಪೋಲಿಸ್ ಠಾಣೆಯಲ್ಲಿ ಚಾಸಾ-2 ಮತ್ತು 5 ರವರ ಸಹಿಯನ್ನು ಪಡೆದುಕೊಂಡರು ಎಂದರೆ ಸರಿ. ನನ್ನ ಹೆಡಗೈ ಹೆಬ್ಬೆಟ್ಟಿನ ಬೆರಳಿನ ಗುರುತನ್ನು ಪೋಲಿಸ್ ಠಾಣೆಯಲ್ಲಿ ಒಂದು ಕಡೆ ಪಡೆದುಕೊಂಡರು, ಸಾಕ್ಷಿ ಮುಂದುವರೆದು ನಾನು ನನ್ನ ಎಡಗೈ ಹೆಬ್ಬೆಟ್ಟಿನ ಗುರುತನ್ನು ನಿಪಿ-2 ರಲ್ಲಿ ಹಾಕಿರುತ್ತೇನೆ ಎಂದು ನುಡಿಯುತ್ತಾರೆ.

ನಾನು ಪೋಲಿಸ್ ಠಾಣೆಗೆ ಬೆಳಿಗ್ಗೆ 10.00 ಗಂಟೆ ಸಮಯದಲ್ಲಿ ಹೋದೆನು , ನನ್ನ ಜೊತೆ 5-6 ಜನ ಬಂದಿದ್ದರು. ಆ ದಿನದಂದು ನಾನು ಪೋಲಿಸ್ ಠಾಣೆಯಲ್ಲಿ ಎಷ್ಟು ಸಮಯದವರೆಗೆ ಇದ್ದೆ ಎಂದರೆ ನನಗೆ ತಿಳಿದಿಲ್ಲ. ಸಾಕ್ಷಿ ಮುಂದುವರೆದು ನನಗೆ ಓದಲು ಬರೆಯಲು ಬರುವುದಿಲ್ಲ ಎಂದು ನುಡಿದಿರುತ್ತಾರೆ, ಮುಂದುವರೆದು ಸಾಕ್ಷಿಯು ಸಂಜೆ 4.00 ರಿಂದ 5.00 ಗಂಟೆ ಸಮಯವಾಗಿತ್ತು ಎಂದು ನುಡಿದಿರುತ್ತಾರೆ.

ನನಗೂ ಮತ್ತು ಆರೋಪಿಗಳ ನಡುವೆ ಜಮೀನಿನ ವಿಷಯಕ್ಕೆ

ಮಾತುಕತೆ ಇಲ್ಲದ ಕಾರಣ ನಾನು ಸುಳ್ಳು ದೂರನ್ನು ಅವರ ವಿರುದ್ದ ಹಾಕಿದ್ದೇನೆ ಎಂದರೆ ಸರಿಯಲ್ಲ. ನನಗೆ ಆರೋಪಿಗಳು ಹೊಡೆದಿಲ್ಲ, ಬೈಯ್ದಿಲ್ಲ ಮತ್ತು ಪ್ರಾಣಬೆದರಿಕೆಯನ್ನು ಹಾಕಿಲ್ಲ ಎಂದರೆ ಸರಿಯಲ್ಲ. ಪೋಲಿಸರು ಸ್ಥಳಕ್ಕೆ ಬಂದಿಲ್ಲ ಹಾಗೂ ನಿಪಿ-2 ರಂತೆ ಮಹಜರು ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ನಾನು ಸುಳ್ಳು ದೂರನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪೋಲಿಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ- ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**2 ನೇ ಅ. ನ್ಯಾ. ದಂ. ಮತ್ತು ಜೆಎಂಎಫ್‌ಸಿ, ಮಾಗಡಿ.**